

بسم اللهِ الرّحمٰن الرّحيم

# ಇಹಲೋಕ ಮತ್ತು ಪರಲೋಕದ ಒಳಿತಿಗಾಗಿ ಮಾಡುವ ದುಆ
# ವಾಗ್ದತ್ತ ಮಸೀಹ್(ಅ)ರ ಉಪದೇಶ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–03–2026** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಇಂದು ನಾನು ಈದ್ ಖುತ್ಬವನ್ನು ಸಹ ಕೊಟ್ಟಿದ್ದೇನೆ, ಆದ್ದರಿಂದ ಈಗ ನಾನು ಹ್ರಸ್ವವಾಗಿ ಖುತ್ಬ ಕೊಡುತ್ತೇನೆ. ಅದಕ್ಕಾಗಿ ನಾನು ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಉದ್ಧರಣಿಯನ್ನು ಆರಿಸಿಕೊಂಡಿದ್ದೇನೆ, ಅದರೆಡೆಗೆ ನಾವು ಯಾವಾಗಲೂ ಗಮನಹರಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಒಬ್ಬ ಸತ್ಯವಿಶ್ವಾಸಿಯ ಲೌಕಿಕ ಜಗತ್ತಿನೊಂದಿಗಿನ ಸಂಬಂಧಗಳು ಎಷ್ಟು ವಿಸ್ತಾರವಾಗಿರುತ್ತವೆಯೋ, ಅದು ಅವನ ಉನ್ನತ ಸ್ಥಾನಮಾನಗಳಿಗೆ ಕಾರಣವಾಗುತ್ತದೆ, ಏಕೆಂದರೆ ಅವನ ಗುರಿ ಧರ್ಮವಾಗಿರುತ್ತದೆ. ಲೌಕಿಕ ಜಗತ್ತಿನ ಸಂಬಂಧಗಳು ಒಳ್ಳೆಯದಾಗಿರಲು ಕಾರಣವೇನೆಂದರೆ ಅವುಗಳ ಉದ್ದೇಶವು ಧರ್ಮವಾಗಿರುತ್ತದೆ, ಅಂದರೆ ಲೌಕಿಕ ಸಂಬಂಧಗಳ ಉದ್ದೇಶವು ಧರ್ಮವೇ ಆಗಿರಬೇಕು. ಇದು ಸತ್ಯವಿಶ್ವಾಸಿಯ ಲಕ್ಷಣವಾಗಿದೆ ಹಾಗೂ ಲೋಕ, ಅದರ ಸಂಪತ್ತು ಮತ್ತು ಸ್ಥಾನಮಾನಗಳು ಧರ್ಮದ ಸೇವಕರಾಗಿರುತ್ತವೆ.

ಒಟ್ಟಿನಲ್ಲಿ, ಮೂಲ ವಿಷಯವೇನೆಂದರೆ, ಲೌಕಿಕತೆ ಗುರಿಯಾಗಿರಬಾರದು, ಬದಲಾಗಿ ಲೌಕಿಕತೆಯನ್ನು ಪಡೆಯುವುದರ ಹಿಂದಿನ ಮೂಲ ಉದ್ದೇಶವು ಧರ್ಮವಾಗಿರಬೇಕು. ನಾವು ಲೌಕಿಕ ಸಂಪತ್ತನ್ನು ಗಳಿಸಿದರೂ, ನಮ್ಮ ದೀನ್ ಉತ್ತಮವಾಗಬೇಕು ಮತ್ತು ನಾವು ದೀನಿನ ಸೇವೆ ಮಾಡಬೇಕು ಎಂಬುದೇ ಅದರ ಉದ್ದೇಶವಾಗಿರಬೇಕು. ಲೌಕಿಕ ಸಂಪತ್ತನ್ನು ಗಳಿಸುವುದಿದ್ದರೂ ಅದು ಧರ್ಮದ ಒಳಿತಿಗಾಗಿ ಇರಬೇಕು. ಅಲ್ಲದೆ ತಪ್ಪು ಕೆಲಸಗಳನ್ನು ಮಾಡಿ ನಮ್ಮ ಇಹಲೋಕ ಹಾಗೂ ಪರಲೋಕಗಳನ್ನು ಹಾಳುಮಾಡಿಕೊಳ್ಳುವುದಕ್ಕಲ್ಲ, ಬದಲಾಗಿ ನಮ್ಮ ಪರಲೋಕವನ್ನು ಸುಧಾರಿಸಲು ಮತ್ತು ನಮ್ಮ ಧರ್ಮವನ್ನು ಸುಧಾರಿಸಲು ನಾವು ಲೌಕಿಕ ಸಂಗತಿಗಳನ್ನು ಗಳಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಲೌಕಿಕ ಸಂಗತಿಯನ್ನು, ಅದು ಧರ್ಮದ ಸೇವಕನಾಗುವ ರೀತಿಯಲ್ಲಿ ಪಡೆಯಬೇಕು. ಉದಾಹರಣೆಗೆ, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಪ್ರಯಾಣಕ್ಕಾಗಿ ಮನುಷ್ಯನು ವಾಹನವನ್ನು ಉಪಯೋಗಿಸುತ್ತಾನೆ ಮತ್ತು ಸಾಮಾನುಗಳನ್ನು ಜೊತೆಯಲ್ಲಿ ತೆಗೆದುಕೊಳ್ಳುತ್ತಾನೆ, ಆದರೆ ಅವನ ಮೂಲ ಉದ್ದೇಶವು ತನ್ನ ಗುರಿಯನ್ನು ತಲುಪುವುದು ಆಗಿರುತ್ತದೆಯೇ ಹೊರತು ವಾಹನ ಅಥವಾ ಯಾತ್ರಾಸಾಮಗ್ರಿಗಳು ಆಗಿರುವುದಿಲ್ಲ. ಪ್ರಯಾಣದಲ್ಲಿ ಅನುಕೂಲಗಳನ್ನು ಸೃಷ್ಟಿಸಲು ನಾವು ಜೊತೆಗೊಯ್ಯುವ ಈ ಎಲ್ಲ ವಸ್ತುಗಳ ಉದ್ದೇಶವು, ಪ್ರಯಾಣವು ಆರಾಮವಾಗಿ ಕಳೆಯಲಿ ಮತ್ತು ನಾವು ನಮ್ಮ ಗುರಿಯನ್ನು ತಲುಪಲಿ ಎಂಬುದಾಗಿರುತ್ತದೆ. ಅದಲ್ಲದೇ ನಾವು ಪ್ರಯಾಣದಲ್ಲಿ ಕೇವಲ ಆ ವಸ್ತುಗಳಿಂದ ಸಂತೋಷವನ್ನು ಪಡೆಯುವುದಕ್ಕಲ್ಲ. ಇದೇ ರೀತಿ ಮನುಷ್ಯನು ಲೌಕಿಕ ವಿಷಯವನ್ನು ಗಳಿಸಬೇಕು, ಆದರೆ ಅದನ್ನು ಧರ್ಮದ ಸೇವಕ ಎಂದು ತಿಳಿದುಕೊಂಡಾಗಿರಬೇಕು.

**'ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್ ವಖಿನಾ ಅಝಾಬನ್ನಾರ್'**. ಅಂದರೆ, ಓ ಅಲ್ಲಾಹ್, ನಮಗೆ ಲೌಕಿಕ ಒಳಿತುಗಳನ್ನು ದಯಪಾಲಿಸು ಮತ್ತು ಪರಲೋಕದ ಒಳಿತುಗಳನ್ನು ಸಹ ನೀಡು. ಅಲ್ಲಾಹನು ಈ ದುಆ ನಮಗೆ ಕಲಿಸಿಕೊಟ್ಟಿದ್ದಾನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: **'ರಬ್ಬನಾ ಆತಿನಾ ಫಿದ್ದುನ್‌ಯಾ ಹಸನತನ್ ವಫಿಲ್ ಆಖಿರತಿ ಹಸನತನ್'** ಎಂದು ಅಲ್ಲಾಹನು ಕಲಿಸಿಕೊಟ್ಟ ಪ್ರಾರ್ಥನೆಯಲ್ಲಿ ಲೋಕಕ್ಕೆ ಮೊದಲ ಆದ್ಯತೆ ನೀಡಿದ್ದಾನೆ. ಆದರೆ ಯಾವ ಲೋಕಕ್ಕೆ? ಲೌಕಿಕ ಒಳಿತುಗಳಿಗೆ. ಅಂದರೆ ಪರಲೋಕದಲ್ಲೂ ಒಳಿತುಗಳಿಗೆ ಕಾರಣವಾಗುವಂತಹದ್ದು. ಯಾವ ಲೌಕಿಕತೆಯನ್ನು ಪಡೆದುಕೊಂಡರೆ ಪರಲೋಕದಲ್ಲೂ ಲಾಭವಾಗುತ್ತದೆಯೋ, ಅಂತಹ ಲೌಕಿಕ ವಸ್ತುಗಳು ನಮಗೆ ಸಿಗಬೇಕು, ಅವು ಪರಲೋಕದ ಒಳಿತುಗಳಿಗೆ

ಕಾರಣವಾಗಬೇಕು. ಅದಲ್ಲದೆ ಪರಲೋಕದಲ್ಲಿ ನಮಗೆ ಅವಮಾನ ಎದುರಾಗುವಂತಾಗಬಾರದು. ನಾವು ಸಂಪೂರ್ಣವಾಗಿ ಲೌಕಿಕತೆಯಲ್ಲೇ ಮುಳುಗಿಹೋದರೆ ನಮಗೆ ಅವಮಾನವನ್ನು ಎದುರಿಸಬೇಕಾಗುವುದು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಈ ಪ್ರಾರ್ಥನೆಯನ್ನು ಕಲಿಸಿಕೊಟ್ಟಿರುವುದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ, ಒಬ್ಬ ಸತ್ಯವಿಶ್ವಾಸಿ ಲೌಕಿಕತೆಯನ್ನು ಪಡೆಯುವಾಗ **'ಹಸನಾತುಲ್ ಆಖಿರತ್'** (ಪರಲೋಕದ ಒಳಿತುಗಳ) ಬಗ್ಗೆ ಗಮನ ಹರಿಸಬೇಕು. ಇದರ ಜೊತೆಗೆ **'ಹಸನತುದ್ದುನ್‌ಯಾ'** (ಲೋಕದ ಒಳಿತು) ಎಂಬ ಪದದಲ್ಲಿ, ಒಬ್ಬ ಸತ್ಯವಿಶ್ವಾಸಿ ಮುಸ್ಲಿಮನು ಲೌಕಿಕ ವಸ್ತುಗಳನ್ನು ಗಳಿಸುವಾಗ ಅಳವಡಿಸಿಕೊಳ್ಳಬೇಕಾದ ಎಲ್ಲ ಅತ್ಯುತ್ತಮ ಲೌಕಿಕ ಮಾರ್ಗಗಳ ಉಲ್ಲೇಖವು ಇದರಲ್ಲಿ ಬಂತು. ಲೌಕಿಕ ಸಂಪತ್ತನ್ನು ಗಳಿಸಲು ಬಳಸುವ ಪ್ರತಿಯೊಂದು ಮಾರ್ಗದಿಂದ ಒಳಿತು ಮತ್ತು ಒಳ್ಳೆಯದೇ ಆಗಬೇಕು. ಅಲ್ಲದೇ ಇತರ ಜನರಿಗೆ ತೊಂದರೆ ಉಂಟುಮಾಡುವಂತಹ ಮಾರ್ಗವಾಗಬಾರದು ಅಥವಾ ನಮ್ಮ ಸಹಜೀವಿಗಳ ಎಡೆಯಲ್ಲಿ ಯಾವುದೇ ನಾಚಿಕೆ ಮತ್ತು ಅವಮಾನಕ್ಕೆ ಕಾರಣವಾಗಬಾರದು. ಅಂತಹ ಲೌಕಿಕತೆ ನಿಸ್ಸಂದೇಹವಾಗಿ 'ಹಸನತುಲ್ ಆಖಿರತ್'ಗೆ ಕಾರಣವಾಗುತ್ತದೆ. ನಿಮಗೆ ಮಾತ್ರವಲ್ಲದೆ ಮಾನವೀಯತೆಗೂ ಲಾಭ ತರುವಂತಹ ಲೌಕಿಕ ವಿಷಯಗಳನ್ನು ಗಳಿಸಬೇಕು. ಲೋಕದಲ್ಲಿ ನಿಮಗೆ ಅವಮಾನಕ್ಕೆ ಕಾರಣವಾಗುವಂತಹ, ನಿಮ್ಮ ಕುಟುಂಬ ಮತ್ತು ನಿಮ್ಮ ಆಪ್ತರಿಗೆ ನಾಚಿಕೆ ತರುವಂತಹ ಯಾವುದೇ ಕೃತ್ಯಗಳನ್ನು ಮಾಡಬಾರದು. ಬದಲಾಗಿ ಜೀವನವು ಸ್ವಚ್ಛ ಮತ್ತು ಪರಿಶುದ್ಧವಾಗಿರಬೇಕು, ಒಳಿತು ಮತ್ತು ತಖ್ವದಲ್ಲಿ ನಡೆಯುವ ಜೀವನವಾಗಿರಬೇಕು. ಅಂತಹ ಜೀವನವಿದ್ದರೆ ಮತ್ತು ಅಂತಹ ಲೋಕವನ್ನು ಗಳಿಸಲು ನೀವು ನಿಮ್ಮ ಜೀವನವನ್ನು ಮುಡಿಪಾಗಿಡುವಾಗ, ಅದು ನಿಮಗೆ ಇಹಲೋಕ ಮತ್ತು ಪರಲೋಕಗಳೆರಡರಲ್ಲೂ ಅನುಗ್ರಹವನ್ನು ದಯಪಾಲಿಸುತ್ತದೆ.

ಇಂದು ಲೋಕವು ಸಾಮಾನ್ಯವಾಗಿ ತನ್ನದೇ ಉದ್ದೇಶಗಳು ಮತ್ತು ಹಿತಾಸಕ್ತಿಗಳನ್ನು ಪೂರೈಸಿಕೊಳ್ಳುವುದರಲ್ಲೇ ಬಿದ್ದಿದೆ. ವೈಯಕ್ತಿಕ ಹಿತಾಸಕ್ತಿಗಳಿಗೆ ಆದ್ಯತೆ ನೀಡಲಾಗುತ್ತಿದೆ. ನಾವು ಸಮುದಾಯಗಳನ್ನು ನೋಡಿದರೆ, ಅವರಿಗೆ ಕೇವಲ ತಮ್ಮ ಸಮುದಾಯದ ಚಿಂತೆಯಷ್ಟೇ ಇದೆ. ಅವರಿಗೆ ಮಾನವೀಯತೆಯ ಕಾಳಜಿಯಿಲ್ಲ. ಅವರು ಅದರಲ್ಲೇ ಇದ್ದು ತಮ್ಮ ವಿನಾಶಕ್ಕೆ ತಾವೇ ಕಾರಣವಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಾವು ನಮ್ಮ ಇಹಲೋಕ ಮತ್ತು ಪರಲೋಕವನ್ನು ಸುಧಾರಿಸಲು ಮತ್ತು ಎಲ್ಲ ರೀತಿಯ ವಿಪತ್ತುಗಳಿಂದ ಸುರಕ್ಷಿತವಾಗಿರಲು, ನಾವು ಅಲ್ಲಾಹನ ಬಳಿ ಇಹಲೋಕ ಮತ್ತು ಪರಲೋಕದ ಒಳಿತುಗಳನ್ನು ಬೇಡುವುದರ ಕಡೆಗೆ ಹೆಚ್ಚಿನ ಗಮನಹರಿಸಬೇಕಾದ ಅಗತ್ಯವಿದೆ. ನಾನು ಹೇಳಿದಂತೆ, ಲೋಕವು ವಿನಾಶದ ಪ್ರಪಾತಕ್ಕೆ ಇಳಿಯುತ್ತಿದೆ. ಅಲ್ಲಾಹನು ನಮ್ಮನ್ನು ಇದರಿಂದ ರಕ್ಷಿಸಲಿ.

ನಾವು ನಮ್ಮ ಕರ್ಮಗಳನ್ನು ಸುಧಾರಿಸಿಕೊಳ್ಳುವ ಸೌಭಾಗ್ಯವನ್ನು ಅಲ್ಲಾಹನು ನೀಡಲಿ ಮತ್ತು ಆ ದೃಷ್ಟಿಯಿಂದ ಪ್ರಾರ್ಥನೆಗಳನ್ನು ಮಾಡುವ ತೌಫೀಕ್ ಕೂಡ ನಮಗೆ ಲಭಿಸಲಿ. ಈಗಷ್ಟೇ ಈದ್ ಖುತ್ಬದಲ್ಲಿ ನಾನು ಹೇಳಿದಂತೆ, ನಿಜವಾಗಿಯೂ ಈ ಒಳಿತುಗಳನ್ನು ಪಡೆಯುವ ಸೌಭಾಗ್ಯವನ್ನು ಅಲ್ಲಾಹನು ನಮಗೆ ದಯಪಾಲಿಸಲಿ, ಅತ್ಯುತ್ತಮ ಪ್ರಾರ್ಥನೆಗಳನ್ನು ಮಾಡುವ ಸೌಭಾಗ್ಯ ನೀಡಲಿ ಮತ್ತು ಅವುಗಳನ್ನು ಅಲ್ಲಾಹನು ಸ್ವೀಕರಿಸಲಿ. ಆಮೀನ್.

—————————*****—————————

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِی الْقُرْبٰی
وَيَنْهٰی عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔

***Friday Sermon delivered by Hadrath Khaleefatul Masih Al Khamis[atba]***
At, ***'Masjid Mubarak'***, *Islamabad*, *Tilford*, U.K. On 20-03-2026
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email***: *khutuba.kannada@gmail.com*
**You can find all the Sermons archived at**: www.alislam.org/friday-sermon